ಪ್ರಮಾಣ ವಚನ ಭೋದಿಸಿದ ದಿನಾಂಕ ಃ**13.06.2025**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎ ವಕೀಲರಿಂದಃ

ನನ್ನ ಅಜ್ಜ ಬೊಳಿಯ ಪೂಜಾರಿರವರ ಜೀವಿತ ಕಾಲದಲ್ಲಿ ಅವರ ಎಲ್ಲಾ ಮಕ್ಕಳು ಒಂದೇ ಮನೆಯಲ್ಲಿ ವಾಸವಿದ್ದಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೊಳಿಯ ಪೂಜಾರಿರವರ ಮರಣಾನಂತರ ಮನೆಯ ವ್ಯವಹಾರಗಳನ್ನೆಲ್ಲಾ ನನ್ನ ತಂದೆ ನಾರಾಯಣ ಪೂಜಾರಿರವರು ನೋಡಿಕೊಳ್ಳುತ್ತಿದ್ದರು. ಬೊಳಿಯ ಪೂಜಾರಿರವರ ಜೀವಿತ ಕಾಲದಲ್ಲಿ ಹಾಗೂ ಅವರ ಮರಣಾನಂತರ ದಾವಾ ಸ್ವತ್ತುಗಳಲ್ಲಿ ವಿಷ್ಣುಮೂರ್ತಿ ದೈವದೇವರ ಆರಾಧನೆ ನಡೆಯುತ್ತಾ ಬರುತ್ತಾ ಇತ್ತು. ದೈವಾರಾಧನೆಗೆ ಸಂಬಂಧಪಟ್ಟ ಖರ್ಚು ವೆಚ್ಚಗಳನ್ನು ಯಾವ ಭೂಮಿಯಿಂದ ಬಂದ ಹುಟ್ಟುವಳಿಯಿಂದ ಭರಿಸುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯವರ ಮಾಡುತ್ತಿದ್ದ ಭೂಮಿಯಿಂದ ಬಂದ ಹುಟ್ಟುವಳಿಯಿಂದ ಖರ್ಚು ವೆಚ್ಚಗಳನ್ನು ಭರಿಸಲಾಗುತ್ತಿತ್ತು ಎಂದು ನುಡಿಯುತ್ತಾರೆ.

2. ವಾದಿಯ ತಾಯಿ ಸೇಸಮ್ಮರವರ ವಿವಾಹದ ಜವಾಬ್ದಾರಿಯನ್ನು ಯಾರು ನಿರ್ವಹಿಸಿದ್ದರು ಎಂದರೆ ಸಾಕ್ಷಿಯು ನಾನು ಚಿಕ್ಕವನಿದ್ದ ಕಾರಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು 1956 ರ ಸಾಲಿನಲ್ಲಿ ಜನಿಸಿದ್ದೇನೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 1968 ರ ಸಾಲಿನಲ್ಲಿ ನಾನು 5 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡಿರಬಹುದು. ಆ ಸಮಯದಲ್ಲಿ ಕುಟುಂಬದಲ್ಲಿ ಏನೆಲ್ಲಾ ವ್ಯವಹಾರಗಳು ನಡೆಯುತ್ತಿತ್ತು ಎಂದು ನನಗೆ ಗೊತ್ತಾಗುತ್ತಿರಲಿಲ್ಲ.

3. ನಾನು ದಾವಾ ಸ್ವತ್ತುಗಳಲ್ಲಿ ಇರುವ ಮನೆಯಲ್ಲಿಯೇ ವಾಸವಿದ್ದೆನು. ವಾದಿಯ ತಾಯಿ ಸೇಸಮ್ಮನವರನ್ನು ಎಲ್ಲಿಗೆ ಮದುವೆ ಮಾಡಿಕೊಡಲಾಯಿತೆಂದು ನನಗೆ ಗೊತ್ತಿಲ್ಲ, ಅದೇ ರೀತಿ ಸೇಸಮ್ಮನವರು ಮದುವೆಯಾದ ಜಾಗದಿಂದ ದಾವಾ ಸ್ವತ್ತುಗಳು ಎಷ್ಟು ಅಂತರದಲ್ಲಿ ಇರುತ್ತವೆ ಎಂಬುದು ನನಗೆ ಗೊತ್ತಿಲ್ಲ.

4. ಸೇಸಮ್ಮನವರು ಜೀವಂತ ಇದ್ದಾಗ ದಾವಾ ಸ್ವತ್ತುಗಳಲ್ಲಿ ನಡೆಯುತ್ತಿದ್ದ ದೈವಗಳ ಆರಾಧನೆಗೆ ಬರುತ್ತಿದ್ದರೋ ಇಲ್ಲವೋ ಎಂಬ ಬಗ್ಗೆ ನನಗೆ ನೆನಪಿಲ್ಲ. ನನ್ನ ಅತ್ತೆ ಸೇಸಮ್ಮನವರನ್ನು ನಾನು ನೋಡಿದ್ದೇನೆ ಹಾಗೂ ಅವರ ಜೊತೆ ಮಾತನಾಡಿದ್ದೇನೆ. ಸೇಸಮ್ಮನವರು ತಮ್ಮ ಜೀವಿತ ಅವಧಿಯಲ್ಲಿ ತಮ್ಮ ಸಹೋದರರ ಮನೆಗಳಿಗೆ ಬಂದು ಹೋಗುತ್ತಿದ್ದರಾ ಎಂದರೆ ಸಾಕ್ಷಿಯು ಕಡಿಮೆ ಎಂದು ನುಡಿಯುತ್ತಾರೆ.

5. ಅಳಿಯಕಟ್ಟು ಕಾನೂನು ಅನ್ವಯವಾಗುವ ಕುಟುಂಬಗಳ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಹಾಗೂ ಹೆಣ್ಣುಮಕ್ಕಳ ಮಕ್ಕಳಿಗೆ ಕುಟುಂಬದ ಸ್ವತ್ತುಗಳಲ್ಲಿ ಸಮನಾದ ಹಕ್ಕು ಇರುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಆಸ್ತಿಗಳು.

6. ದಾವಾ ಐಟಂ ನಂ-17 ನನ್ನ ತಂದೆಗೆ 1964 ನೇ ಇಸವಿಯಲ್ಲಿ ಬಂದ ದರ್ಖಾಸ್ತು ಜಮೀನು. ಸದರಿ ದರ್ಖಾಸ್ತು ವ್ಯವಹರಣೆಯಲ್ಲಿ ತಯಾರಿಸಲಾದ ಮೂಲನಕ್ಕೆ ನಮ್ಮ ಹತ್ತಿರವೇ ಇರುತ್ತದೆ. ಸದರಿ ಮೂಲನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಕ್ಷೇಪವಿದೆಯಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿದ್ದೇನೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದೃಢೀಕೃತ ನಕ್ಷೆಯನ್ನು ತೋರಿಸಲಾಗಿ ಅದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ-26 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಂಜುರಾದ ಸರ್ವೆ ನಂ. 54/1ಬಿ ಜಮೀನು ನಾರಾಯಣ ಪೂಜಾರಿರವರಿಗೆ ಮಂಜೂರಾದ ಬಗ್ಗೆ ಮಂಜುರಾತಿ ಪತ್ರ ಹಾಗೂ ಆದೇಶದ ದೃಡೀಕೃತ ನಕಲನ್ನು ತೋರಿಸಲಾಗಿ ಅವುಗಳನ್ನು ಒಪ್ಪಿದ ಕಾರಣ ಸದರಿ ದಾಖಲೆಗಳನ್ನು ನಿಪಿ-27 ಹಾಗೂ 28 ಎಂದು ಗುರುತಿಸಲಾಯಿತು. ನಿಪಿ-26 ಕಾಣಿಸಿರುವ ಸರ್ವೆ ನಂ.55/4, 55/1, 55/3 ಹಾಗೂ 55/2 ಈ ದಾವೆಯಲ್ಲಿ ಒಳಗೊಂಡಿರುವ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆಗೆ ಮಂಜೂರಾಗಿರುವ ಸ್ವತ್ತು ಮೇಲೆ ತಿಳಿಸಿದ ಸರ್ವೆ ನಂ.ಗಳ ಜಮೀನಿಗೆ ಲಗತ್ತಾಗಿರುವ ಸ್ವತ್ತು ಎಂದರೆ ಸರಿ.

7. ದಾವಾ ಸ್ವತ್ತುಗಳ ಸಂಬಂಧಿತ ಪಹಣಿಗಳನ್ನು ನಾನು ನೋಡಿದ್ದೇನೆ. ದಾವಾ ಸ್ವತ್ತುಗಳು ಖದೀಮು ವರ್ಗದ ಜಮೀನುಗಳು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವು

4 ಸರ್ವೆ ನಂ.ಗಳ ಸ್ವತ್ತು ಎಂದು ನುಡಿಯುತ್ತಾರೆ. ಆ ಸರ್ವೆ ನಂ.ಗಳು ಯಾವುವು ಎಂದರೆ 55/ಸಿ1 ವಿಸ್ತೀರ್ಣ 1 ಎಕರೆ 37 ಸೆಂಟ್, 54/2 ವಿಸ್ತೀರ್ಣ 15 ಸೆಂಟ್, 55/3 ವಿಸ್ತೀರ್ಣ 3 ಸೆಂಟ್, 55/4 ವಿಸ್ತೀರ್ಣ 2 ಸೆಂಟ್.

8. ದರ್ಖಾಸ್ತು ವ್ಯವಹರಣೆಯಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಶೀನಪ್ಪ ಪೂಜಾರಿ ಜಂಟಿ ಹೇಳಿಕೆಯನ್ನು ನೀಡಿದ್ದಾರೆಂದರೆ ನನಗೆ ಗೊತ್ತಿಲ್ಲ. ದರ್ಖಾಸ್ತು ವ್ಯವಹರಣೆಯಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಜಂಟಿ ಹೇಳಿಕೆಯನ್ನು ನೀಡಿ ಅದರಲ್ಲಿ ದಾವಾ ಸ್ವತ್ತುಗಳು ಅವರ ಹಿರಿಯರಿಂದ ಬಂದ ಮೂಲಗೇಣಿ ಸ್ವತ್ತುಗಳು ಎಂದ ತಿಳಿಸಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದರ್ಖಾಸ್ತು ವ್ಯವಹರಣೆಯಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಏನು ಹೇಳಿಕೆ ನೀಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಪ್ರಯತ್ನಿಸಿಲ್ಲ ಎಂದು ನುಡಿಯುತ್ತಾರೆ.

9. ದಾವಾ ಆಸ್ತಿಗಳಲ್ಲಿ ನನ್ನ ಪ್ರಕಾರ 650 ರಬ್ಬರ್ ಮರಗಳು, 1 ಸಾವಿರ ಅಡಿಕೆ ಮರಗಳು ಹಾಗೂ 15 ತೆಂಗು ಮರಗಳು ಇರುತ್ತವೆ. ಅವುಗಳಿಂದ ವಾರ್ಷಿಕವಾಗಿ ಎಷ್ಟು ಉತ್ಪತ್ತಿ ಇದೆ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ, ಅಂದಾಜು 3 ಲಕ್ಷ ರು. ವಾರ್ಷಿಕ ಉತ್ಪತ್ತಿ ಇರಬಹುದು. ಬೊಳಿಯ ಪೂಜಾರಿರವರ ಜೀವಿತ ಕಾಲದಲ್ಲಿ ಅವರ ಎಲ್ಲಾ ಕೃಷಿ ಚಟುವಟಿಕೆಗಳಲ್ಲಿ ವಾದಿಯ ತಾಯಿ ಸೇಸಮ್ಮ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಆಸ್ತಿಗಳು ನನ್ನ ಅಜ್ಜ ಬೊಳಿಯ ಪೂಜಾರಿರವರ ಮೂಲಗೇಣಿ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಆಸ್ತಿಗಳು ನನ್ನ ಅಜ್ಜ ಬೊಳಿಯ ಪೂಜಾರಿರವರ ಮೂಲಗೇಣಿ ಹಕ್ಕಿನ ಸ್ವತ್ತುಗಳು ಆದ ಕಾರಣ ವಾದಿಯ ತಾಯಿ ಸೇಸಮ್ಮನವರಿಗೂ ಕೂಡಾ ನನ್ನ ಅಜ್ಜ ಬೊಳಿಯ ಪೂಜಾರಿರವರ ಇತರ ಮಕ್ಕಳಷ್ಟೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

10. ನನ್ನ ತಂದೆ ಹಾಗೂ ಚಿಕ್ಕಪ್ಪಂದಿರಾದ ಶೀನಪ್ಪ ಪೂಜಾರಿ ಹಾಗೂ ಕೃಷ್ಣಪ್ಪ ಪೂಜಾರಿರವರು ಒಟ್ಟು ಕುಟುಂಬದ ಪ್ರಯೋಜನಕ್ಕೋಸ್ಕರ ಭೂ ನ್ಯಾಯ ಮಂಡಳಿಗೆ

ಮಂಜೂರಾತಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸೇಸಮ್ಮನವರಿಗೆ ದಾವಾಸ್ವತ್ತಿನಲ್ಲಿ ಬರಬೇಕಾದ ಹಕ್ಕುಗಳು ಆಕೆಯ ಒಬ್ಬನೇ ಮಗನಾದ ವಾದಿಯ ಹಿಸ್ಸೆಗೆ ಬರಬೇಕಾಗುತ್ತದೆ ಎಂದರೆ ಸರಿಯಲ್ಲ. ವಾದಿ ಬರಬೇಕಾದ ಹಿಸ್ಸೆಯನ್ನು ತಪ್ಪಿಸಬೇಕು ಎನ್ನುವ ದುರುದ್ದೇಶದಿಂದ ಈ ದಾವೆಯಲ್ಲಿ ನಾನು ದುಸ್ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು